# ಆಹಾ ಸುದ್ದಿ!

★ ಸಸಿತೋಟ





ಮುಂಜಾನೆ ಎದ್ದ ಕೂಡಲೇ ಹಲವರ ಬಾಯಿಯನ್ನು ಮೊದಲು ಸ್ಪರ್ಶಿಸುವುದು ಕಾಫಿ. ದೇಹಕ್ಕೆ ಚೈತನ್ಯ ಮೂಡಿಸುವ ಕಾಫಿಯ ಜೊತೆ ಕಿಕ್ ಸೇರಿಸಲು ಕೊರಿಯಾದ ಜಾಂಗ್ ಕಾಫಿ ಕಪ್ ಮೂತಿಗೆ ತುಟಿಯಾಕಾರ ನೀಡಿದ್ದಾನೆ. ನಿದ್ರೆಯ ಮತ್ತಿನಲ್ಲಿರುವ ಸಂಗಾತಿಯ ತೊಳೆಯದ ಅಧರದ ಮುತ್ತಿನ ಬದಲು ಇದು ಎಷ್ಟೋ ವಾಸಿ ಎಂದು ಡಿಸೈನರ್ ಕಪ್ ಖರೀದಿಸುತ್ತಿದ್ದಾರಂತೆ.



ಕ್ಯಾಲಿಫೋರ್ನಿಯಾದ ಈ ವ್ಯಕ್ತಿ ಸೂರ್ಯ ಸ್ನಾನಕ್ಕೆಂದು 200 ಅಡಿ ಎತ್ತರಕ್ಕಿರುವ ಗಾಳಿ ಯಂತ್ರ ಏರಿ ಕುಳಿತಿದ್ದಾನೆ. ಡ್ರೋನ್ ಕ್ಯಾಮೆರಾ ಮೂಲಕ ಈ ಚಿತ್ರ ಸೆರೆ ಹಿಡಿಯಲಾಗಿದೆ. ಸೂರ್ಯನ ಕಿರಣ ನೆಲಕ್ಕೆ ಬೀಳಲು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ ಎಂದು ಸೂರ್ಯನ ಸಮೀಪ ಹೋಗಲು ಯತ್ನಿಸುತ್ತಿರಬಹುದು ಈ ಸೂರ್ಯ ಪ್ರೇಮಿ.




ಶೂ ಪಾಲಿಷ್ ಮಾಡುವ ಟೆಹ್ರಾನಿನ ಮೊಹಮ್ಮದ್ ಅಲಿ ಕಾರನ್ನೇ ಎತ್ತರ ಹಿಮ್ಮಡದ ಶೂನಂತೆ ಪರಿವರ್ತಿಸಿಕೊಂಡು ಓಡಾಡುತ್ತಿದ್ದಾನೆ. ಶೂ ಪಾಲಿಷ್ ಮಾಡುವ ಎಲ್ಲರಿಗೂ ಕಾರು ಖರೀದಿ ಸಾಮರ್ಥ್ಯವಿದ್ದರೆ ಬ್ರಷ್ ಮತ್ತು ಪಾಲಿಷ್ ಡಬ್ಬಿ ಯಾಕೆ ಟ್ರೇಡ್ ಮಾರ್ಕ್ ಆಗುತ್ತಿತ್ತು?

ಚೆನ್ನೈ ವಿಮಾನ ನಿಲ್ದಾಣದ ಸೂಚನಾ ಫಲಕವೊಂದು ಫೇಸ್‌ಬುಕ್‌ನಲ್ಲಿ ಭಾರಿ ಜನಪ್ರಿಯತೆ ಗಳಿಸಿದೆ. ‘ಈಟಿಂಗ್ ಕಾರ್ಪೆಟ್ ಇಸ್ ಪ್ರೊಹಿಬಿಟೆಡ್’ ಎಂಬ ಸೂಚನೆಯಿರುವ ಫಲಕದ ಚಿತ್ರವನ್ನು ಉದ್ಯಮಿ ಜಸ್ಟಿನ್ ಲೀ ಎಂಬಾತ ಫೇಸ್‌ಬುಕ್‌ಗೆ ಹಾಕಿದ್ದಾನಂತೆ. ಸಾಂಬಾರಿನ ಕಲೆಯಿರುವ ಕಾರ್ಪೆಟ್ ತಿನ್ನಲು ಅದ್ಯಾರಿಗೆ ಆಸೆಯಾಗಿತ್ತೋ ಎಂದುಕೊಳ್ಳಬೇಡಿ. ಕಾರ್ಪೆಟ್ ಮೇಲೆ ಕುಳಿತುಕೊಳ್ಳುವುದು ಹಾಗೂ ತಿನ್ನುವುದನ್ನು ನಿಷೇಧಿಸಲಾಗಿದೆ ಎಂದು ಹಿಂದಿಯಲ್ಲಿರುವ ಬರಹ ಇಂಗ್ಲಿಷ್‌ನಲ್ಲಿ ಈ ಗತಿ ಕಂಡಿದೆ.

ಜಿಂಬಾಬ್ವೆ ಕ್ರಿಕೆಟ್ ತಂಡದ ನಾಯಕ ಬ್ರೆಂಡನ್ ಟೇಲರ್ ಮೈದಾನದಲ್ಲಿದ್ದಾಗ ಆತ ಆಟವಾಡುವುದನ್ನು ನೋಡಬಹುದು. ಆದರೆ ಮೈದಾನದ ಹೊರಗೆ ಯಾವ ಆಟ ಆಡಬಹುದು ಎಂದರೆ ಯಾವುದಾದರೂ ಕಾರಿನಲ್ಲಿ ಮಲಗಿರಬಹುದು ಎಂಬ ಉತ್ತರ ಸಿಗಬಹುದು. ಇಂಗ್ಲೆಂಡ್‌ನ ನಾಟಿಂಗ್‌ಹ್ಯಾಂನಲ್ಲಿ ಆತ ರಾತ್ರಿ ಕುಡಿದು ಚಿತ್ತಾಗಿ ಉದ್ಯಮಿಯ ಮನೆಯೊಂದರ ಮುಂದೆ ನಿಂತಿದ್ದ ಕಾರಲ್ಲಿ ಹೋಗಿ ಮಲಗಿದ್ದನಂತೆ. ಸದ್ಯ ಪೊಲೀಸರು ಬಂದು ಬ್ರೆಂಡನ್‌ನನ್ನು ಗುರುತಿಸಿದರಂತೆ. ಇಲ್ಲವಾದರೆ ಬ್ರೆಂಡೆನ್‌ಗೇ ಸಿಕ್ಸರ್ ಹೊಡೆತ ಸಿಗುತ್ತಿತ್ತು.



ಇಂಗ್ಲೆಂಡ್‌ನ ಮಾರ್ಟಿನ್ ಟೋವಿ ಬಳಿ ವಾರ್ಷಿಕ ಗಿನ್ನೆಸ್ ದಾಖಲೆ ಪುಸ್ತಕಗಳ ದೊಡ್ಡ ಸಂಗ್ರಹವೇ ಇದೆಯಂತೆ. ಒಟ್ಟು 353 ಸಂಚಿಕೆಗಳನ್ನು ಕಷ್ಟಪಟ್ಟು ಸಂಗ್ರಹಿಸಿರುವ ಮಾರ್ಟಿನ್‌ಗೆ ಸಿಕ್ಕ ಪ್ರಶಸ್ತಿಯೆಂದರೆ ಆತನ ಹೆಸರೇ ಗಿನ್ನೆಸ್ ದಾಖಲೆಗೆ ಸೇರಿದ್ದು.